ಹೊಡೆದು ಎಚ್ಚರಿಸಿತ್ತು. ಅಂಗೈ ಉಜ್ಜಿಕೊಳ್ಳುತ್ತಾ ಕಣ್ಣ ಮುಂದೆ ಹಿಡಿದು 'ಕರಾಗ್ರೇ ವಸತೇ ಲಕ್ಷ್ಮೀ...' ಹೇಳಿಕೊಂಡು ಮಂಚ ಇಳಿದಿದ್ದಳು ಪ್ರಭಾವತಿ. ಗಂಡ ಮಗ್ಗುಲಲ್ಲಿ ಮಲಗಿದ್ದನೋ, ಇಲ್ಲವೋ ಎಂಬುದನ್ನು ಆ ಮಸುಕು ಬೆಳಕಲ್ಲಿ ಅವಳು ಗಮನಿಸಲು ಹೋಗಿರಲಿಲ್ಲ. ದಿನಚರಿಯ ಕೆಲಸ ಅವಳನ್ನು ಕಾದುಕೊಂಡಿತ್ತು. ಕೊಟ್ಟಿಗೆಯಲ್ಲಿದ್ದ ಜಾನುವಾರುಗಳು ಇವಳು ಎದ್ದ ಸುಳು ಹಿಡಿದು ಎಂಬಂತೆ ತಾವೂ ಮೈ ಕೊಡವಿ ಎದ್ದು ಗಂಜಲ ಹಾಕುತ್ತಾ, 'ಅಂಬಾ...' ಎಂದು ದನಿಯೆತ್ತಿ ಕರೆಯುತ್ತಾ, ತುರಿಸಿಕೊಳ್ಳಲೂ ಪುರುಸೊತ್ತಿಲ್ಲದ ಕೆಲಸದ ಹೊರೆಯಲ್ಲಿ ವ್ಯಸ್ತಳಾಗಿಬಿಟ್ಟಿದ್ದಳು ಪ್ರಭಾವತಿ. ಗಂಟೆ ಎಂಟಾದರೂ ಗಂಡ ಕಾಫಿ ಕುಡಿಯಲು ಬರಲಿಲ್ಲವೆಂದು 'ಇದೆಂತಾ ಹೊತ್ಕಂಡ್ಹೋಗೋ ನಿದ್ದೆ...' ಎನ್ನುವ ಅಸಮಾಧಾನದಿಂದಲೇ ಪ್ರಭಾವತಿ ಶಯನಗೃಹ ಹೊಕ್ಕರೆ ಎಲ್ಲಿದ್ದಾನೆ ಗಂಡ? ಕಾಲಬುಡದಲ್ಲಿ ಗುಪ್ಪೆಯಾಗಿ ಬಿದ್ದಿದ್ದ ಹೊದಿಕೆ ಎತ್ತಿ ಮಡಿಸಿಡುತ್ತಾ ಗೊಣಗಿಕೊಂಡಿದ್ದಳು ಪ್ರಭಾವತಿ,

'ಕಾಫಿ ಕುಡ್ಕಂಡು ಎತ್ಲಾಗೆ ಬೇಕಾದ್ರೂ ಹೋಗ್ಬಾರ್ದಿತ್ತಾ? ವಿಚಿತ್ರದ ಜನಾನಪ್ಪಾ...'

★★★

ಹಾಗೆ ನಾಪತ್ತೆಯಾದ ಶ್ರೀಪಾದ ಮತ್ತೆಂದೂ ಯಾರ ಕಣ್ಣಿಗೂ ಕಾಣಿಸಿಕೊಳ್ಳದೆ ಶಾಶ್ವತವಾಗಿ ನಾಪತ್ತೆಯಾಗಿಬಿಟ್ಟ. ಒಂದಕ್ಕೆ ಒಂದು ಸೇರಿಸಿದರೆ ಎರಡು ಎಂದು ಪ್ರಭಾವತಿ ಕಾರಣವನ್ನು ಊಹಿಸಿದರೂ ಶೀನಿ ಮಾವನಿಗೆ ಇದರ ಹಿಂದೆ ತನ್ನ ಪಾತ್ರ ಇರಬಹುದೆಂಬ ಕಿಂಚಿತ್ ಅನುಮಾನವೂ ಸುಳಿಯಲಿಲ್ಲ. "ಏನಾರೂ ಜಗಳ ಆಗಿತ್ತನೇ? ಸಿಟ್ಟು ಮಾಡ್ಕಂಡಿದ್ನನೇ? ಮಾತು ಬಿಟ್ಟಿದ್ನನೇ?" ಎಂದು ತಿರುಗಾಮುರುಗಾ ಅವವೇ ಪ್ರಶ್ನೆಗಳನ್ನು ಕೇಳಿ ತಲೆ ಚಿಟ್ಟು ಹಿಡಿಸಿದ್ದ. ಎಲ್ಲಕ್ಕೂ ಗೋಣಲ್ಲಾಡಿಸಿದ್ದಳು ಪ್ರಭಾವತಿ. ಒಂದೊಮ್ಮೆ ಮದರಂಗಿ ಪ್ರಕರಣವನ್ನೇ ದೊಡ್ಡದಾಗಿಸಿಕೊಂಡಿದ್ದರೆ ಆ ಕಾರಣಕ್ಕಾಗಿ ಗಂಡ ಮನೆ ತೊರೆದು ಹೋಗುವಷ್ಟು ಕಠಿಣವಾಗುತ್ತಾನೆ ಎಂಬುದು ಅವಳ ಕಲ್ಪನೆಗೆ ನಿಲುಕದ್ದು. 'ಇವನೇನು ಗಂಡನಾ, ಷಂಡನಾ? ಅನುಮಾನ ಬಂದಿದ್ದರೆ ದಬಾಯಿಸಿ ಕೇಳಬೇಕಿತ್ತು. ಕಪಕಪಾಳಕ್ಕೆ ಎರಡು ಬಾರಿಸಬೇಕಿತ್ತು. ಕತ್ತಿ ಹಿಡಿದು ಕುತ್ತಿಗೆಯನ್ನು ಕಚಕ್ ಅನ್ನಿಸಿ ರುಂಡದ ಜುಟ್ಟು ಹಿಡಿದು ನೇತಾಡಿಸುತ್ತಾ ಪೊಲೀಸ್ ಸ್ಟೇಷನ್ನಿಗೆ ಹೋಗಿ ಬಂದಿಯಾಗಬಹುದಿತ್ತು. ಎಂಥದೂ ಇಲ್ಲ. ನಾಮರ್ದನ ಹಾಗೆ ಕುಂಡೆಗೆ ಕಾಲು ಕೊಟ್ಟು ಕೀಸಿ ಬಿಟ್ಟ' ಒಮ್ಮೊಮ್ಮೆ ಗಂಡನ ಮೇಲೆ ಉಗ್ರಕೋಪ. 'ತಾನು ನಡೆದುಕೊಂಡ ರೀತಿ ಗರತಿಗೆ ತಕ್ಕದ್ದಾಗಿರಲಿಲ್ಲ. ಅವನ ಸ್ವಭಾವಕ್ಕೆ ಮದ್ದರೆಯಲು ಆಯ್ದುಕೊಂಡ ಕ್ರಮ ತಿರುಗುಬಾಣವಾಯ್ತೇ?' ಎಂದು ಒಮ್ಮೊಮ್ಮೆ ಪಶ್ಚಾತ್ತಾಪ. ಅದುವರೆಗೆ ಕಾಣದೆ ಇದ್ದ, ಕಂಡರೂ ತಾತ್ಸಾರಕ್ಕೆ ಗುರಿಯಾಗಿದ್ದ, ಗಂಡನ ಒಳ್ಳೆಯತನದ ನಡವಳಿಕೆಗಳು ಕಣ್ಣಿಗೆ ರಾಚುವಂತೆ ಎದ್ದು ಕಾಣುತ್ತಾ ಪ್ರಭಾವತಿಯನ್ನು ಹಣಿದು ಹಾಕಿದವು. ತಿಂಗಳೆನ್ನುವಷ್ಟರಲ್ಲಿ ಅರ್ಧಕ್ಕರ್ಧ ಕುಸಿದು ಹೋಯಿತು ಜೀವ. ಕುಸಿದು ಹೋಯಿತು ಚೈತನ್ಯ.

ಎಲ್ಲಿ ಕಣ್ಮರೆಯಾದ ತನ್ನ ಭೋಳೇಸ್ವಭಾವದ ಗಂಡ? 'ಮುಟ್ಟಿದರೆ ಮುನಿ'ಯಂತಿದ್ದ ಅವನಿಗೆ ಅಷ್ಟು ಧೈರ್ಯ ಬಂದಿದ್ದಾದರೂ ಹೇಗೆ? ದೇಶಾಂತರ ತಲೆ ಮರೆಸಿಕೊಂಡು ಹೋದನೇ? ಕೆರೆ, ಬಾವಿ ಹುಡುಕಿಕೊಂಡನೇ? ಹೋಗುವಾಗ ದುಡ್ಡೇನಾದರೂ ತೆಗೆದುಕೊಂಡು ಹೋದನೇ ಅಥವಾ ಬರಿಗೈಲಿ? ಟ್ರೆಝುರಿಯಲ್ಲಿರುವ ದುಡ್ಡಿನ ಕುರಿತು ಪ್ರಭಾವತಿಗೆ ಕಿಂಚಿತ್ತೂ ಜ್ಞಾನವಿಲ್ಲದುದರಿಂದ ಈ ಊಹೆ ಪ್ರಯೋಜನಕ್ಕೆ ಬರುವಂತಹದ್ದಾಗಿರಲಿಲ್ಲ. ಛೂಮಂತ್ರ ಹಾಕಿದಂತೆ ಮಂಗಮಾಯವಾಗಿ ಹೋದವನನ್ನು ಹುಡುಕಲು ಶೀನಿಮಾವ ತನ್ನದೇ ಗುಂಪು ಕಟ್ಟಿಕೊಂಡು ಮಾಡದ ಪ್ರಯತ್ನ ಉಳಿಯಲಿಲ್ಲ. ಸುತ್ತ ಹತ್ತೂರಿನ ಬಾವಿ, ಕೆರೆಕಟ್ಟೆಗಳನ್ನು ಬಿಡದೆ ಶೋಧಿಸಿದ್ದಾಯ್ತು. ಕಂಡಕಂಡವರನ್ನು ವಿಚಾರಿಸಿಕೊಂಡು ಊರೂರು ಅಲೆದಿದ್ದಾಯ್ತು. ಪೊಲೀಸ್ ಸ್ಟೇಷನ್ನಿನಲ್ಲಿ ಕಂಪ್ಲೇಂಟ್ ದಾಖಲಿಸಿದ್ದಾಯ್ತು. ಶಾಸ್ತ್ರ ಕೇಳಿದ್ದಾಯ್ತು. ಅಂಜನ ಹಾಕಿ ನೋಡುವುದರಲ್ಲಿ